ಸಚಿವರುಗಳ ಆಸ್ತಿ ವಿವರ

೧೫೮. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಚಿವ ಸಂಪುಟ ವಿವಿಧ ಸಚಿವರ ಆಸ್ತಿಯ ಹಾಗೂ ಭಾದ್ಯತೆಯ ವಿವರಗಳು ಸರ್ಕಾರದ ಬಳಿಯಿದೆಯೇ ;

ಆ) ಇದ್ದಲ್ಲಿ ಪ್ರತಿ ಸಚಿವರ ವಿವರಗಳನ್ನು ಒದಗಿಸುವುದು ;

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಮತ್ತು ಆ) ಕರ್ನಾಟಕ ಲೋಕಾಯುಕ್ತ ಅಧಿನಿಯಮ ೧೯೮೪ರ ೨೨ನೇ ಕಲಂಗನುಗುಣವಾಗಿ ಸಚಿವರುಗಳು ತಮ್ಮ ಆಸ್ತಿಗಳ ಬಗ್ಗೆ ಮಾಹಿತಿಯನ್ನು ಲೋಕಾಯುಕ್ತರಿಗೆ ಸಲ್ಲಿಸಿರುತ್ತಾರೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ನಾನು ಕೇಳಿದ ಪ್ರಶ್ನೆ 'ಸಚಿವ ಸಂಪುಟದ ವಿವಿಧ ಸಚಿವರಆಸ್ತಿಯ ಹಾಗೂ ಬಾಧ್ಯತೆಯ ವಿವರಗಳು ಸರ್ಕಾರದ ಬಳಿ ಇದೆಯೇ' ಎಂದು ಅದಕ್ಕೆ ಉತ್ತರವಾಗಿ 'ಸಚಿವರುಗಳು ತಮ್ಮ ಆಸ್ತಿಗಳ ಬಗ್ಗೆ ಮಾಹಿತಿಯನ್ನು ಲೋಕಾಯುಕ್ತರಿಗೆ ಸಲ್ಲಿಸಿರುತ್ತಾರೆ ಎಂದು ಹೇಳಿದ್ದಾರೆ. ಆ ತರಹ ಹೇಳುವುದರಲ್ಲಿ ಅರ್ಥವಿದೆಯೇ? ಸರ್ಕಾರದಲ್ಲಿ ಇದೆಯೋ ಇಲ್ಲವೋ?

ಶ್ರೀ ರಾಮಕೃಷ್ಣ ಹೆಗಡೆ.—ಸರ್ಕಾರದಲ್ಲಿರಬೇಕಾದ ಪ್ರಮೇಯವಿಲ್ಲ. ಹೊಸ ಲೋಕಾಯುಕ್ತದ ಕಾಯಿದೆಯು ಪ್ರಕಾರ ಪ್ರತಿವರ್ಷ ಪ್ರತಿಯೊಬ್ಬ ಸಚಿವರು ತಮ್ಮ ಆಸ್ತಿ ಪಾಸ್ತಿಗಳ ಸಾಲಸೋಲಗಳ ಸಂಪೂರ್ಣವಾದ ಲೆಕ್ಕವನ್ನು ಲೋಕಾಯುಕ್ತಕ್ಕೆ ಕಳುಹಿಸಬೇಕಾಗುತ್ತದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಸದನದ ಸದಸ್ಯರಾಗಿ ಸಚಿವರ ಆಸ್ತಿಪಾಸ್ತಿಗಳ ವಿವರಗಳನ್ನು ಕೇಳುವುದಕ್ಕೆ ನನಗೆ ಹಕ್ಕಿಲ್ಲವೇ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸಚಿವರ ಆಸ್ತಿಪಾಸ್ತಿಗಳ ಪಟ್ಟಿಯು ಕರಡು ಲೋಕಾಯುಕ್ತರ ಮುಂದಿದೆ, ಅವರು ಕ್ರಮ ಕೈಗೊಳ್ಳಬೇಕೆನ್ನುವ ಅಭಿಪ್ರಾಯವಿದೆಯೆ?

ಶ್ರೀ ರಾಮಕೃಷ್ಣ ಹೆಗಡೆ.—ಹಿಂದಿನ ಸಲ ಈ ಪ್ರಶ್ನೆ ಇಲ್ಲಿ ಬಂದಾಗ ಕೆಲವು ಸಚಿವರು ಇನ್ನೂ ಆಸ್ತಿಯ ಲೆಕ್ಕವನ್ನು ಕೊಟ್ಟಿರಲಿಲ್ಲ. ನಾನು ಈ ಬಗ್ಗೆ ಸಚಿವರಿಗೆ ಪತ್ರ ಬರೆದು ನೆನಪು ಮಾಡಿದ ಮೇಲೆ ಅಷ್ಟು ಸಚಿವರು ಇವತ್ತು ತಮ್ಮ ಆಸ್ತಿಪಾಸ್ತಿಗಳ ಲೆಕ್ಕವನ್ನು ಕೊಟ್ಟಿದ್ದಾರೆ,

ಅಧ್ಯಕ್ಷರು.—ಮಾನ್ಯ ಶ್ರೀ ಬಸವಲಿಂಗಪ್ಪನವರು, ಹಾಗೂ ಶ್ರೀ ವೀರಯ್ಯಸ್ವಾಮಿಯವರು ಬಂದಿಲ್ಲ. ಈಗ ಮುಂದಿನ ಪ್ರಶ್ನೆ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ : ಖಿಟಿಟ (೧೧೯೭)

ಅಧ್ಯಕ್ಷರು.—ಈ ಪ್ರಶ್ನೆಗೆ ಸಮಯ ಬೇಕು ಎಂದು ಕೇಳಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇದಕ್ಕೆ ಸಮಯ ಬೇಕು ಎಂದರೆ ಹೇಗೆ?

ಶ್ರೀ ರಾಮಕೃಷ್ಣ ಹೆಗಡೆ.—ಇಡೀ ರಾಜ್ಯದ ವಿವರಗಳನ್ನು ಕೇಳಿದ್ದಾರೆ. ಇದಕ್ಕೆ ಕಾಲಾವಕಾಶ ಕಾಗುತ್ತದೆ.

ವೈದ್ಯಾಧಿಕಾರಿಯನ್ನು ಅಮಾನತ್ತಿನಲ್ಲಿಟ್ಟಿರುವುದು

೧೫೦೮. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಆರೋಗ್ಯ ಇಲಾಖೆಯಲ್ಲಿ ಅಮಾನತ್ತಿನಲ್ಲಿಡಲಾದ ಗಜೆಟೆಡ್ ಹುದ್ದೆಯ ಅಧಿಕಾರಿಗಳ ಸಂಖ್ಯೆ ಎಷ್ಟು? ಆ ಪೈಕಿ ಆರು ತಿಂಗಳಿಗಿಂತ ಹೆಚ್ಚು ಅವಧಿಗೆ ಅಮಾನತ್ತಿನಲ್ಲಿರುವವರೆಷ್ಟು?